# ಪಂಪನ ಆದಿಪುರಾಣ: ಒಂದಷ್ಟು ತಾತ್ವಿಕತೆಗಳು

**ಡಾ.ಬಸವರಾಜ ಪೂಜಾರ್, ಸಹ ಪ್ರಾಧ್ಯಾಪಕರು-ಕನ್ನಡ, ಎಸ್ ಜಿ ಕಾಲೇಜು,ಕೊಪ್ಪಳ.**

## ಪೀಠಿಕೆ:

ಆದಿಪುರಾಣ ಕೃತಿಯನ್ನು ಧಾರ್ಮಿಕ, ಅಲೌಕಿಕ, ಕೇವಲಜ್ಞಾನ ನಿರೂಪಣೆಯೆಂದು ಕರೆಯುತ್ತೇವೆ. ಇಷ್ಟೇ ಕೃತಿಯೆಂದು ಭಾವಿಸಿದರೆ ಸರಳೀಕರಿಸದಂತಾಗುತ್ತದೆ. ಈ ಕೃತಿ ಮನುಷ್ಯನ ಸಂಕೀರ್ಣ ಸ್ಥಿತಿಯನ್ನು ನಿಕಷಕ್ಕೊಡ್ಡಿ ವೈವಿಧ್ಯಮಯ ಅನುಭವಗಳಿಂದ ಭಾವಕೋಶವೊಂದನ್ನು ಕಟ್ಟಿಕೊಡುತ್ತದೆ. ಸಮುದಾಯ ನೆಲೆಯಲ್ಲಿ ಸಾಹಿತ್ಯಕ ಪರಿಭಾಷೆಯೊಂದನ್ನು ರೂಪಿಸಿ ಸಾಂಸ್ಕೃತಿಕ ಸಂವೇದನೆಯನ್ನುಂಟು ಮಾಡುತ್ತದೆ. `ಬೆಳಗುವೆನಿಲ್ಲಿ ಲೌಕಿಕಮನ್' ಎನ್ನುತ್ತಾ ಕಾಲದ ಸಾತತ್ಯ ಮತ್ತು ಸಂಸ್ಕೃತಿಯನ್ನು ಮತ್ತೆ ಮತ್ತೆ ಬೆಳಕಿನಲ್ಲಿ ನೋಡುವಂತೆ ಮಾಡುತ್ತಾನೆ. ಪಂಪ ಬ್ರಾಹ್ಮಣ ಧರ್ಮದಿಂದ ಜಿನಧರ್ಮಕ್ಕೆ ಬರುವಾಗ ರೂಪಕವೊಂದನ್ನು ಕೊಡುತ್ತಾನೆ. ಅವನ ತಾತನ ಕಾಲದಲ್ಲಿ ಯಜ್ಞದ ಧೂಪ ಬೆಳೆಬೆಳೆದು ವ್ಯಕ್ತಿತ್ವವನ್ನು ಕಪ್ಪುಗಟ್ಟಿಸಿತು ಅಂತ. `ಕಪ್ಪುಗಟ್ಟಿದ' ಎಂಬ ರೂಪಕ ವಿಶೇಷವಾದುದು. ಕಪ್ಪು ಆತ್ಮದ್ದು, ಧರ್ಮದ್ದು, ದೇಹದ್ದು, ಜ್ಞಾನದ್ದು, ಮನಸ್ಸಿನದು ಆಗಿರಬಹುದು. ಅದನ್ನು ಮತ್ತೆ ಮತ್ತೆ ತೊಳೆದು ಬೆಳಕನ್ನುಂಟುಮಾಡುವುದು ಮುಖ್ಯ. ಪಂಪ ಅದಕ್ಕಾಗಿ ಆದಿಪುರಾಣದಲ್ಲಿ ಜನ್ಮ ಜನ್ಮಗಳ ಕಥನಗಳನ್ನು ಹೆಣೆಯುತ್ತಾ ಹೋಗುತ್ತಾನೆ. ಜನ್ಮಗಳ ಕಥನ ಕಾಲಕ್ಕೆ ಸಂಬಂಧಿಸಿದವು. ಮನುಷ್ಯ ವೈಭೋಗದ ಕೂಪದೊಳಗೆ ಮುಳುಗುತ್ತಾ ಹೋದಂತೆ ಬದುಕಿನ ನಿಜತ್ವ, ಅಂತಃಸತ್ವ ಕಾಣುವುದೇ ಇಲ್ಲ. ಅದರ ಬೆನ್ನತ್ತಿ ಸಾಂಸ್ಕೃತಿಕ ಬದುಕನ್ನು ನೈತಿಕ ಅರ್ಧಃಪತನಕ್ಕೀಡುಮಾಡುತ್ತಾನೆ. ಈ ಕಾರಣಕ್ಕೆ ಪಂಪ ಆದಿಪುರಾಣದಲ್ಲಿ ವೈಭೋಗದ ಅಗಾಧತೆಯನ್ನು ನಿರೂಪಿಸುತ್ತಲೇ ವೈರಾಗ್ಯದ ಆನನ್ಯತೆಯನ್ನು ಸ್ಥಾಪಿಸುತ್ತಾನೆ. ವೈರಾಗ್ಯ ಮತ್ತು ವೈಭೋಗವನ್ನು ಸಾಮುದಾಯಿಕ, ಜಾರಿತ್ರಿಕ, ಪೌರಾಣಿಕ, ಧಾರ್ಮಿಕ ನೆಲೆಯಲ್ಲಿ ಮುಖಾಮುಖಿಯಾಗಿಸುವುದು ಅಪಾರ ಬೌದ್ಧಿಕ ಪರಿಶ್ರಮವನ್ನು ಬೇಡುತ್ತದೆ.

ಈ ಕೃತಿಯಲ್ಲಿ ಪಂಪ ಜೈನದರ್ಶನ ಮತ್ತು ಕಾವ್ಯದರ್ಶನ ಒಗ್ಗೂಡಿಸಿದ್ದಾನೆ. ಪಂಪ ಜೈನದರ್ಶನ ಮತ್ತು ಕಾವ್ಯದರ್ಶನದ ಮೂಲಕ ಲೋಕದರ್ಶನವೊಂದನ್ನು ಕಾಣಿಸುತ್ತಾನೆ ಅದು ಮಹತ್ವವಾದುದು. ಯಾಕೆಂದರೆ, ಜೈನದರ್ಶನ ಲೋಕವನ್ನು ವೈವಿಧ್ಯತೆಯಲ್ಲಿ ಗ್ರಹಿಸುತ್ತದೆ. ಮನುಷ್ಯನ ನಡವಳಿಕೆಯ ಚೈತನ್ಯವನ್ನು ಪ್ರಕೃತಿ ನೆಲೆಯಲ್ಲಿ ಅರ್ಥೈಯಿಸುತ್ತದೆ. ಮಾನವನನ್ನು ನಿರಂತರ ಕಾಡುವ ಮೋಹದ ಒತ್ತಡಗಳು ಬದುಕನ್ನು ಕತ್ತಲಾಗಿಸುತ್ತದೆ. ಅದಕ್ಕೊಂದು ಬಿಡುಗಡೆಯ ದಾರಿ ಬೇಕು. ಜೈನದರ್ಶನ ಬಿಡುಗಡೆಯ ದಾರಿಯೊಂದು ತೋರಿಸುತ್ತದೆ.

ಅವನ ಕಾಲದ ಸಾಂಸ್ಕೃತಿಕ ಪರಿಸರ ಮತ್ತು ಚರಿತ್ರೆಯ ಜೀವನ ವಿನ್ಯಾಸ ಪಂಪನಿಗೆ ಹೊಸ ತಾತ್ವಿಕತೆಯನ್ನು ಆಲೋಚಿಸುವಂತೆ ಮಾಡಿದೆ. ಆದ್ದರಿಂದ ಜೈನಧರ್ಮದ ವಿವೇಕದ ಮೂಲಕ ಮನುಷ್ಯನ ಆತ್ಯಂತಿಕ ಉತ್ಕಟತೆಗಳಾದ ವೈಭೋಗ ಮತ್ತು ವೈರಾಗ್ಯವನ್ನು ಮುಖಾಮುಖಿಯಾಗಿಸುತ್ತಾನೆ. ವೈಭವದ ಉತ್ತುಂಗತೆಯನ್ನು ನಿರೂಪಿಸುತ್ತಾನೆ. ಹಾಗೆ ವೈರಾಗ್ಯದ ತುತ್ತತುದಿಯನ್ನು ದರ್ಶಿಸುತ್ತಾನೆ. ಆದಿಪುರಾಣದ ಲಲಿತಾಂಗ, ವಜ್ರಜಂಘ, ಆದಿನಾಥ, ಭರತ, ಬಾಹುಬಲಿಯರ ಕಥನದ ಮೂಲಕ ಈ ಮೂಲನೆಲೆಗಳನ್ನೇ ಶೋಧಿಸುವ ಪ್ರಯತ್ನ ಪಂಪ ಮಾಡುತ್ತಾನೆ.

ಮನುಷ್ಯ ತನ್ನತನವನ್ನು ಕಂಡುಕೊಳ್ಳುವುದು ವೈಭೋಗದ ಕುಲುಮೆಯಲ್ಲಿ ಸುಟ್ಟು ಸುಟ್ಟು ಗಟ್ಟಿಯಾದಾಗಲೆ. ನಂತರವೇ ಸಿದ್ಧಿ, ಅರಿವು ಸಂಸ್ಕಾರ, ಮುಕ್ತಿ ದೊರೆಯುತ್ತದೆ. ಮುಕ್ತಿಯ ಹಂತವೇ ವೈರಾಗ್ಯದ ಸ್ಥಿತಿ. ವೈರಾಗ್ಯದ ನಂತರ ಮತ್ತೆ ಜನನವಿಲ್ಲ. ಆದಿನಾಥನ ಕತೆ ಆರಂಭವಾಗಿ ಅವನೊಂದಿಗೆ ಮುಗಿಯುವುದಿಲ್ಲ. ಭರತನ ವೈಭೋಗದ ನಾಶ ಮತ್ತು ಕೇವಲ ಜ್ಞಾನದಿಂದ ಮುಕ್ತಾಯವಾಗುತ್ತದೆ. ಈ ಸಂದರ್ಭದಲ್ಲಿ ಬರುವ ಜನ್ಮ ಜನ್ಮಗಳ ಭವಾವಳಿಗಳ ವೈಭೋಗವನ್ನು ಮೀರುತ್ತಾ, ಲೌಕಿಕದಿಂದ ಮುಕ್ತಿ ಪಡೆಯುತ್ತಲೇ ಇರಬೇಕಾಗುತ್ತದೆ. ಮುಕ್ತಿ ಒಮ್ಮೆ ಸಿಕ್ಕು ಮುಗಿದು ಹೋಗುವುದಿಲ್ಲ. ಅದು ಮತ್ತೆ ಪಡೆಯುತ್ತಲೇ ಇರಬೇಕಾದ ನಿರಂತರ ಪ್ರಕ್ರಿಯೆ. ಅದಕ್ಕೆ ಪಂಪ ಆದಿದೇವನು ಪಡೆಯುವ ಜನ್ಮಗಳ ವಿವರ ಮತ್ತು ವೈಭೋಗ ಜೀವನವನ್ನು ಕಟ್ಟಿಕೊಡುತ್ತಾನೆ. ಒಂದು ಪದ್ಯದಲ್ಲಿ ಸಂಗ್ರಹವಾಗಿ ಆದಿದೇವನ ಜನ್ಮಗಳನ್ನು ಹೇಳುತ್ತಾನೆ.

ಭೋಗಕಾಂಕ್ಷೆಯೊಳ್ ಜಯವಮಳಂ, ಬವೆಕೀ ಮಹಾಬಳಂ,
ಲಲಿತಾಗಂ, ವಜ್ರಜಂಘಂ
ಭೋಗಭೂಮಿಜಂ ಶ್ರೀಧರ ದೇವರ, ಸುವಿಧನರಾಧಿಪನ್,
ಅಮ್ಯತೇಂದ್ರಂ ಸಾಗರಾಂತಂ
ನೆಲನನಿತುಮಂ ಚಕ್ರದಿಂದ ಬೆಸರಯ್ಯದ ವಜ್ರನಾಭಿಯಾಗಿ
ಸವಾರ್ಥಸಿದ್ಧಿಯೊಳ್ ಪುಟ್ಟಿ ಬಂದಿಲ್ಲ ತಾನಾದಿ ದೇವನದಂ (ಆದಿಪು. 11-44)

ಆದಿದೇವನು ಮುಕ್ತಿಯನ್ನು ವೈರಾಗ್ಯದ ಹಂತವನ್ನು ತಲುಪಲು ಒಂಭತ್ತು ಜನ್ಮಗಳನ್ನು ಪಡೆಯಬೇಕಾಯಿತು. ಈ ಹಂತದಲ್ಲಿ ಆದಿದೇವನು ಅನುಭವಿಸುವ ವೈಭೋಗ ಉತ್ಕೃಷ್ಟವಾದುದು. ಈ ವೈಭೋಗ ಅನುಭವವನ್ನು ಸೃಷ್ಟಿಸುವುದಿಲ್ಲ. ಜೀವನಕ್ಕೆ ಪದಾರ್ಥವನ್ನು ತೋರಿಸುವುದಿಲ್ಲ. ಸಮಸ್ತವನ್ನು ಭೋಗದ ನೆಲೆಯಲ್ಲಿಯೇ ನೋಡುತ್ತದೆ. ಇದರಿಂದ ವ್ಯವಸ್ಥೆ ಅನೈತಿಕ ಸ್ವರೂಪ ಪಡೆಯುತ್ತದೆ. ಇದರಿಂದ ಪಾರಾಗುವ ಮಾರ್ಗ ವೈರಾಗ್ಯ. ವೈಭೋಗದ ಅನುಭವಗಳು ಸಂಪೂರ್ಣ ವೈರಾಗ್ಯದ ಅಂಶಗಳನ್ನು ಮರೆಮಾಚಿದರೆ ಅಲ್ಲಿ ಲೋಕನೀತಿ, ಧರ್ಮ ಉಳಿಯುವುದಿಲ್ಲ. ಈ ಆತಂಕ ಪಂಪನದು. ಆದ್ದರಿಂದ ಪಂಪ ವೈರಾಗ್ಯದ ಅನುಭವವನ್ನು ದರ್ಶನ ಮಾಡಿಸುತ್ತಾನೆ. ಲೋಕ ಸುಸ್ಥಿತಿಯಲ್ಲಿರಬೇಕಾದರೆ ಈ ಎರಡು ಅನುಭವಗಳು ಸಂಯೋಗಗೊಳ್ಳಬೇಕು. ಆಗ ನೈತಿಕ ಆವರಣ ವ್ಯವಸ್ಥೆಯಲ್ಲಿ ನಿರ್ಮಾಣವಾಗುತ್ತದೆ. ಇಲ್ಲದಿದ್ದರೆ ಹಿಂಸೆಯೇ ಬದುಕಿನ ಮಾನದಂಡ ಮತ್ತು ಮೌಲ್ಯವಾಗುತ್ತದೆ. ಆದ್ದರಿಂದ ಜೀವನ ಹೆಚ್ಚು ಭೋಗ ಲಾಲಸೆ, ಮೋಹ, ಲೋಭ, ವಿಜೃಂಭಣೆಯಿಂದ ಕೂಡಿರಬಾರದು. ಇದರಿಂದ ಕಳಚಿಕೊಳ್ಳುವ ಅರಿವು ಇರಬೇಕು. ಇಂತಹ ಅರಿವನ್ನು ಮನಗಾಣಿಸುವುದೇ ಪಂಪನ ಆದಿಪುರಾಣ. ಆ ಅರಿವು ಸೃಷ್ಟಿಯಾಗುವುದೆ ವೈಭೋಗ ಮತ್ತು ವೈರಾಗ್ಯದ ಮುಖಾಮುಖಿಯಲ್ಲಿ. ಎಲ್ಲಿವರೆಗೆ ನೋಡುವ, ಸವಿಯುವ, ಭೋಗಿಸುವ ಮನದೊಂದು ಇರುತ್ತದೆಯೋ ಅಲ್ಲಿವರೆಗೆ ವೈಭೋಗ ಹಿಡಿದಿರುತ್ತದೆ. ಅಲ್ಲಿ ಅರಿವು ಮೂಡುವುದಿಲ್ಲ.

ವೈರಾಗ್ಯವೊಂದು ಸ್ವಾತಂತ್ರ್ಯದ ಮುಖ. ಲೋಕಾಂತರದಿಂದ ಬಿಡುಗಡೆಯಾಗಿ ತನ್ನನ್ನು ತಾನು ಅರ್ಥಮಾಡಿಕೊಳ್ಳುತ್ತಾ ಮುನ್ನಡೆಯುವುದು. ಇದು ಅನುಭವಕ್ಕೆ ನಿಲುಕಬೇಕು. ಉಪದೇಶ, ನೀತಿ, ಆದರ್ಶದಿಂದ ಹುಟ್ಟುವಂತದಲ್ಲ. ತನಗೇನು ದಕ್ಕಲಿಲ್ಲ, ತನ್ನಿಂದ ಆಗುವುದಿಲ್ಲ. ಇನ್ನೊಬ್ಬರಂತೆ ನಾನಿಲ್ಲ ಎಂದು ಪಲಾಯನಗೈಯ್ಯುವ ವೈರಾಗ್ಯ ಪಡೆಯುವ ಮುಖವಾಡ ನಿಜವಲ್ಲ. ಅದು ಮತ್ತೆ ಜನ್ಮಾಂತರದೊಳಗೆ ಹಿಂದಿನ ನೆನಪಿಗೆ ಕೊಂಡೊಯ್ಯುತ್ತದೆ. ಆದಿದೇವನಿಗೆ ಜನ್ಮಾಂತರದ ನೆನಪುಗಳೇ

ಕಾಡುತ್ತಲೇ ಹೋಗುತ್ತವೆ. ಅದಕ್ಕೆ ಜನ್ಮ ತಳೆಯುತ್ತಾ ವೈಭೋಗದಲ್ಲಿ ಮುಳುಗುತ್ತಾನೆ. ಆತನಿಗೆ ಸ್ವಾತಂತ್ರವೇ ಇಲ್ಲ.

ಭರತ ಬಾಹುಬಲಿಯ ನಡುವಿನ ಸಂಘರ್ಷ ಅರಿವಿನ ಕಿಡಿಯನ್ನು ಹುಟ್ಟಿಸುತ್ತದೆ. ಮನುಷ್ಯನೊಳಗೆ ನೆಲೆಸಿರುವ ಅಧಿಕಾರ ಮಧ, ಸರ್ವವೂ ನನ್ನದಾಗಬೇಕೆಂಬ ಅತಿಯಾಸೆ, ಅಹಂಕಾರ, ಹಿಂಸೆಯ ಮನೋವೃತ್ತಿ ಭರತನ ಮೂಲಕ ಅನಾವರಣಗೊಳ್ಳುತ್ತದೆ. ಭರತ ಎಲ್ಲವೂ ತನ್ನಿಂದಲೇ ನಡೆಯಬೇಕು. ಸರ್ವಸ್ವವೂ ತಲೆಬಾಗಿ ನಡಕೊಳ್ಳಬೇಕೆಂಬ ಸರ್ವಾಧಿಕಾರಿ ಮನೋಧರ್ಮವೇ ವೈಭೋಗದ ತುಟ್ಟತುದಿ. ಭರತನ ಮೋಹ ತನ್ನ ತಮ್ಮಂದಿರು ಅಡಿಯಾಳಾಗಬೇಕೆಂದು ಬಯಸುತ್ತದೆ. ಬಾಹುಬಲಿ ಎದುರು ನಿಲ್ಲುತ್ತಾನೆ. ಭರತನನ್ನು ಸೋಲಿಸಿ ಮತ್ತೆ ಅದೇ ಯುದ್ಧೋತ್ಸಾಹ ವೈಭೋಗದಲ್ಲಿ ಬಾಹುಬಲಿ ಮುಂದುವರೆಯುವುದಿಲ್ಲ. ವೈರಾಗ್ಯದ ಅನುಭವವನ್ನು ಅಣ್ಣನಿಗೆ ಮಾಡಿಸುತ್ತಾನೆ. ಅರಿವಿನ ದಾರಿ ತೋರಿಸುತ್ತಾನೆ. ಸೋತ ಅಣ್ಣನಿಗೆ ಸರ್ವವನ್ನು ಬಾಹುಬಲಿ ಒಪ್ಪಿಸುತ್ತಾನೆ. ಈ ಸಂದರ್ಭದಲ್ಲಿ ಬಾಹುಬಲಿ ಯೋಚಿಸುವುದು ವೈರಾಗ್ಯದ ನೆಲೆಯನ್ನು ಗಟ್ಟಿಗೊಳಿಸುತ್ತದೆ.

ಸೋದರರೊಳ್ ಸೋದರರಂ
ಕಾದಿಸುವುದು, ಸುತನಂ ತಂದೆಯೆಡೆಯೊಳ್ ಬಿಡ
ದುತ್ಪಾದಿಸುವುದು ಕೋಪಮನ್, ಆಳ
ವೀ ದೊರೆತೆನೆ ತೊಡವುರ್ದೆಯ ರಾಜ್ಯಶ್ರೀಯೊಳ್ (ಆದಿಪು14-122)

ಈ ರಾಜ್ಯವನ್ನೆಲ್ಲ ಮತ್ತೆ ನಿನಗೆ ಕೊಡುತ್ತೇನೆ ನೀನು ಬಯಸಿದ್ದಕ್ಕೆ ನಾನು ಆಶೆ ಪಡುವುದು ನನಗೆ ಕಂಟಕ ಎಂದು ಬಾಹುಬಲಿ ಎಲ್ಲವನ್ನು ಅಣ್ಣನಿಗೆ ಒಪ್ಪಿಸುತ್ತಾನೆ. ತನಗೆ ಕಟಂಕ ಬರುವುದಿಲ್ಲವೆ ಎಂಬ ಬಾಹುಬಲಿಯ ಮಾತು ವೈರಾಗ್ಯವು ಒಂದು ವ್ಯವಸ್ಥೆಯಾಗಬಾರದು ಎಂಬುದನ್ನು ಸೂಚಿಸುತ್ತದೆ. ಭರತನ ವೈಭೋಗದ ಮಿತಿ ಬಾಹುಬಲಿಯ ವೈರಾಗ್ಯದಿಂದ ಗೋಚರಿಸುತ್ತದೆ. ವೈರಾಗ್ಯವು ಕೂಡ ಕಠೋರ ಆಚರಣೆಯಾಗಿ, ನಿಯಂತ್ರಣಯಾಗಿ ನಿಲ್ಲಬಾರದು ಹಾಗಾದರೆ ಅದಕ್ಕೆ ಅರ್ಥವಿಲ್ಲ. ಆದ್ದರಿಂದ ಪಂಪನಿಗೆ ಇವೆರಡರ ಸಂಯೋಗದಿಂದ ಹುಟ್ಟುವ ಅರಿವು ಮುಖ್ಯವಾದುದು ಲೋಕ ಈ ಅರಿವು ದಾರಿಯಲ್ಲಿ ನಡೆಯಬೇಕು.

ವೈರಾಗ್ಯವು ಕೂಡ ಪಲಾಯನವಾದಿಯಾಗಿರಬಾರದು. ಅದು ಬದುಕನ್ನು ಮುನ್ನಡೆಸುವ ಕ್ರಮವಾಗಬೇಕು. ಸಮಾಜದ ತಳಪಾಯವನ್ನು ಗಟ್ಟಿಗೊಳಿಸುವ ವ್ಯವಸ್ಥೆಯಾಗಬೇಕು. ಅನುಭವಿಸುವ ಕರ್ತವ್ಯಗಳು ಸಮಾಜಮುಖಿಯಾಗಿದ್ದು ಸ್ಪಷ್ಟ ರಾಜನೀತಿಯನ್ನು ಹೊಂದಿರಬೇಕು. ಮಾಡುವ ಕರ್ತವ್ಯದಿಂದ ವಿಮುಖನಾಗಿ ನಡೆಯುವುದು ವೈರಾಗ್ಯವಲ್ಲ. ವಜ್ರದಂತನ ಮಗ ಅಮಿತೇಜ ತನಗೆ ಭೌತಿಕ ಸುಖ ಬೇಡವೆಂದು ತಪಸ್ಸು ಕೈಗೊಳ್ಳುತ್ತಾನೆ. ಇದು ವೈರಾಗ್ಯದ ಸ್ಥಿತಿಯಲ್ಲ. ಇಂತಹ ಕರ್ತವ್ಯಚ್ಯುತಿ ವೈರಾಗ್ಯವಲ್ಲ. ನಿರಾಕರಣೆ ಲೋಕಕ್ರಮಗಳನ್ನು ಮೀರದೆ ಲೋಕದೊಳಗೆ ಒಂದಾಗುವುದು. ತನ್ನತನ ಕಂಡುಕೊಂಡು ಅನ್ವೇಷಣೆ ಮಾಡಿಕೊಳ್ಳುವುದು. ಲೋಕನೀತಿಯನ್ನು ಸೃಷ್ಟಿಸುತ್ತಲೇ ಮಾನವೀಯ ಬದುಕನ್ನು ಸೃಷ್ಟಿಸುವುದು ವೈರಾಗ್ಯ. ದರ್ಪ, ದೌರ್ಜನ್ಯ, ದಬ್ಬಾಳಿಕೆಯ ನೆಲೆಯನ್ನು ನಿರಾಕರಿಸುವುದು.

## ಉಪಸಂಹಾರ:

ಪಂಪನಿಗೆ ವೈರಾಗ್ಯವೆಂಬುದು ಲೋಕನಿರಾಕರಣೆಯಲ್ಲ ಲೋಕಪ್ರೀತಿ. ವೈಭೋಗ ಲೋಕಪ್ರೀತಿಯನ್ನು ನಿರಾಕರಿಸಿ, ತನ್ನ ಅಧೀನಗೊಳಿಸುವ ಬಲಪ್ರಯೋಗ ಮಾಡುತ್ತದೆ. ಇದರಿಂದ ಬಿಡುಗಡೆಯಾಗುವುದು ಮುಖ್ಯ ಸಂಸಾರ ಪ್ರೀತಿ ಮೊದಲು. ನಂತರ ವೈರಾಗ್ಯ ಭೋಗ ಮತ್ತು ಯೋಗಗಳು ಸಮನ್ವಯ ಸ್ಥಿತಿಯಲ್ಲಿರಬೇಕು. ಮಾನವನ ಮಿತಿ ಭೋಗದಲ್ಲಿಯೇ ಮುಳುಗುವುದು. ಇದು ಅಪಾಯಕಾರಿಯಾದುದು. ಭೋಗಸುಖ ಮತ್ತು ಯೋಗಸುಖಗಳು ಅತೀ ಸ್ಥಿತಿಗೆ ಹೋಗಬಾರದು. ಯೋಗಸುಖ ಮನೋಸುಖವಾದುದು. ಮನೋಸುಖವೇ ಮುಖ್ಯವೆಂದು ಭಾವಿಸಿದರೆ ಅದೊಂದು ಲೋಕವಿರೋಧಿಯಾಗಿ ಅನೈತಿಕತೆ ಪಡೆಯುತ್ತದೆ. ಆದ್ದರಿಂದ ವೈಭೋಗ ಮಿತಿಯಲ್ಲಿರಬೇಕು. ವೈರಾಗ್ಯ ಕ್ರಿಯಾಹೀನವಾಗಿರಬಾರದು. ಕಾಯಕದೊಂದಿಗೆ ಇರಬೇಕು. ಇಲ್ಲದಿದ್ದರೆ ಅದರಿಂದ ಯಾವ ಪ್ರಯೋಜನವಿಲ್ಲ. ವೈಭೋಗ ಮತ್ತು ವೈರಾಗ್ಯಕ್ಕೆ ಲೋಕಕಲ್ಯಾಣವೇ ಧರ್ಮವಾಗಬೇಕು ಆಗ ಧರ್ಮ ಆತ್ಮಸಾಕ್ಷತ್ಕಾರ ನಿರ್ಮಿಸುತ್ತದೆ. ಮಾನವನು ಧರ್ಮವಂತನಾಗುತ್ತಾನೆ.

## ಆಕರ ಗ್ರಂಥಗಳು:


- ಆದಿಪುರಾಣ ಸಂಗ್ರಹ', ಎಲ್.ಗುಂಡಪ್ಪ, ಮೈಸೂರು ವಿಶ್ವವಿದ್ಯಾಲಯ, ೧೯೫೪,
- 'ಪಂಪಕವಿ ವಿರಚಿತ ಆದಿಪುರಾಣಂ', ಟಿ.ವಿ.ವೆಂಕಟಾಚಲಶಾಸ್ತ್ರೀ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೯೫,
- ಪಂಪನ ಸರಳ ಆದಿಪುರಾಣ, ಎಲ್ ಬಸವರಾಜು, ಅಭಿರುಚಿ ಪ್ರಕಾಶನ, ಮೈಸೂರು, ೨೦೦೮.
- ಕನ್ನಡ ಜೈನ ಸಾಹಿತ್ಯ ಚರಿತ್ರೆ ಸಂಪುಟ - ೧, ಎಸ್.ಪಿ. ಪದ್ಮಪ್ರಸಾದ್,
- ಕನ್ನಡ ಜೈನ ಸಾಹಿತ್ಯ ಚರಿತ್ರೆ ಸಂಪುಟ - ೨, ಎಸ್.ಪಿ. ಪದ್ಮಪ್ರಸಾದ್,